**ಓಎಸ್. ನಂ.*72/2022***

**ಪಿಡಬ್ಲೂ:*02***

**ಇಂದು ದಿನಾಂಕ:*12.03.2025* ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ.ಸಿ.ಕೆ.ಎಂ.ವಕೀಲರಿಂದಃ**

ವಾದಿಗಳು ನನ್ನ ದೊಡ್ಡಪ್ಪನ ಮಕ್ಕಳು. ವಾದಿಗಳು ಇದುವರೆಗೂ ವ್ಯವಸಾಯದಿಂದಲೇ ಜೀವನ ಮಾಡುತ್ತಿದ್ದಾರೆ. ವಾದಿ 1 ಮತ್ತು 2 ರವರು ಯಜಮಾನಿಕೆಯನ್ನು ಯಾರು ಮಾಡುತ್ತಿದ್ದಾರೆ ಎಂದರೆ ಇಬ್ಬರು ಒಟ್ಟಾಗಿ ಇದ್ದಾರೆ, 1 ನೇ ವಾದಿ ಯಜಮಾನಿಕೆ ಮಾಡುತ್ತಿದ್ದಾರೆ. ವಾದಿಗಳು ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ಹೇಳಿದರೆ ಸತ್ಯಂಶ ಹೊರ ಬರುತ್ತಿತ್ತು ಎಂದರೆ ಸರಿ, ಆದರೆ 1 ನೇ ವಾದಿಗೆ joint pain ಇದೆ, 2 ನೇ ವಾದಿಗೆ ಸಕ್ಕರೆ ಕಾಯಿಲೆ ಇದೆ. ವಾದಿಗಳ ಆರೋಗ್ಯದ ಬಗ್ಗೆ ಚಿಕಿತ್ಸೆ ಪಡೆದಿರುವ ಬಗ್ಗೆ ದಾಖಲೆ ಇದೆ. ನಿ.ಪಿ.6 ರಲ್ಲಿ ಗುರುತಿಸಿರುವ ಪವರ್ ಆಫ್ ಅಟಾರ್ನಿ ಎಲ್ಲಿ ಸಿದ್ದ ಪಡಿಸಿದ್ದೀರ ಎಂದರೆ ವಕೀಲರಾದ ಗಿರೀಶ್ ರವರ ಬಳಿ ಸಿದ್ಧಪಿಡಿಸಿದ್ದೇನೆ. ಅದನ್ನು ಸಿದ್ಧ ಪಡಿಸುವ ಕಾಲಕ್ಕೆ ನಾನು ಮತ್ತು ವಾದಿಗಳು ಇಬ್ಬರು ಇದ್ದರು. 1 ನೇ ವಾದಿಗೆ ಕೀಲು ನೋವು ಮತ್ತು 2 ನೇ ವಾದಿಗೆ ಸಕ್ಕರೆ ಕಾಯಿಲೆ ಇರುವ ಬಗ್ಗೆ ಪವರ್ ಆಫ್ ಅಟಾರ್ನಿ ಯಲ್ಲಿ ಬರೆಸಿದ್ದೇನೆ. ವಾದಿಗಳು ಇಬ್ಬರು ಆರೋಗ್ಯವಾಗಿ ಇದ್ದಾರೆ ಆದರೆ ಅವರು ನ್ಯಾಯಾಲಯಕ್ಕೆ ಬಂದರೆ ಸತ್ಯಂಶ ಗೊತ್ತಾಗುತ್ತದೆ ಎಂಬ ಕಾರಣಕ್ಕೆ ಪವರ್ ಆಫ್ ಅಟಾರ್ನಿ ಯನ್ನು ಸೃಷ್ಟಿ ಮಾಡಿ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ.

ನಾನು ಎಸ್.ಎಸ್.ಎಲ್.ಸಿ. ಓದಿದ್ದೇನೆ. ವಾದ ಪತ್ರದಲ್ಲಿ ಬರೆದಿರುವ ಅಂಶಗಳ ಬಗ್ಗೆ ನನಗೆ ಖುದ್ದು ಮಾಹಿತಿ ಇದೆ. ಅದನ್ನು ಬರೆಸುವ ಕಾಲಕ್ಕೆ ಸ್ವತಃ ಹಾಜರಿದ್ದೆ. ದಾವಾ ಆಸ್ತಿಯ ಮೇಲೆ ನನಗೂ ಕೂಡ ಮಾಲೀಕತ್ವ ಮತ್ತು ಸ್ವಾಧೀನ ಇದೆ. ದಾವಾ ಆಸ್ತಿಯ ಸರ್ವೆ ನಂ.2/3 ರಲ್ಲಿ ನಾನು ವ್ಯವಸಾಯ ಮಾಡುತ್ತಿದ್ದೇನೆ. ದಾವಾ ಆಸ್ತಿಗಳಲ್ಲಿ ನಾನು ಪ್ರತ್ಯೇಕವಾಗಿ ವ್ಯವಸಾಯ ಮಾಡುತ್ತಿಲ್ಲ, ವಾದಿಗಳ ಜೋತೆ ವ್ಯವಸಾಯ ಮಾಡುತ್ತಿದ್ದೇನೆ. ದಾವಾ ಆಸ್ತಿಯಲ್ಲಿ ನಾನು ಕೂಡ ವ್ಯವಸಾಯ ಮಾಡುತ್ತಾ ಸ್ವಾಧೀನ ಇದ್ದೇನೆ ಅಂತ ವಕೀಲರಿಗೆ ಮಾಹಿತಿ ಕೊಟ್ಟಿಲ್ಲ. ವಾದ ಪತ್ರ ತಯಾರಿಸಲು ನಾನು ಮತ್ತು ವಾದಿಗಳು ಇಬ್ಬರೂ ಸೇರಿ ಪೂರ್ಣ ಮಾಹಿತಿ ಕೊಟ್ಟಿದ್ದೇವೆ. ಪ್ರತಿವಾದಿ ದಾವಾ ಆಸ್ತಿಯ ಆರ್.ಟಿ.ಸಿ. ಮಾಡಿಕೊಂಡಿದ್ದಾರೆ ಆದ್ದರಿಂದ ನಮ್ಮನ್ನು ದಾವಾ ಆಸ್ತಿಯ ಮಾಲೀಕರೆಂದು ಮಾಡಿಕೊಳ್ಳಲು ಕೇಸು ಹಾಕಿದ್ದೇವೆ.

ಸರ್ವೆ ನಂ.2/3 ರಲ್ಲಿ 1 ಎಕರೆ 3½ ಗುಂಟೆ, ಸರ್ವೆ ನಂ.3/6 ರಲ್ಲಿ 32 ಗುಂಟೆ ವಿಸ್ತೀರ್ಣಕ್ಕೆ ಕೇಸು ಹಾಕಿದ್ದೇವೆ. ಸರ್ವೆ ನಂ.2/3 ರ ದಕ್ಷಿಣಕ್ಕೆ-ಬೆಟ್ಟದಪುರ-ಕಿತ್ತೂರು ರಸ್ತೆ, ಉತ್ತರಕ್ಕೆ-ರಮೇಶ ರವರ ಜಮೀನು, ರವೇಶ ರವರು ಸರ್ವೆ ನಂಬರ್ ಗೊತ್ತಿಲ್ಲ. ಪಶ್ಚಿಮಕ್ಕೆ-ಸರ್ವೆ ನಂ.3/3ರ ಜಮೀನು, ಪೂರ್ವಕ್ಕೆ-ಡಿ.ಕೆ.ನಾಗರಾಜು ರವರ ಜಮೀನು, ನಾಗರಾಜು ರವರಿಗೆ ಸೇರಿದ ಸರ್ವೆ ನಂ.8/2. ಸರ್ವೆ ನಂ.3/3 ರ ದಕ್ಷಿಣಕ್ಕೆ-ಬೆಟ್ಟದಪುರ-ಕಿತ್ತೂರು ರಸ್ತೆ, ಉತ್ತರಕ್ಕೆ-ಸರ್ವೆ ನಂ.3/3 ರಲ್ಲಿನ ಪ್ರತಿವಾದಿಯ ಜಮೀನು, ಪಶ್ಚಿಮಕ್ಕೆ-ಗಗನ ರವರ ಜಮೀನು, ಪೂರ್ವಕ್ಕೆ-ಸರ್ವೆ ನಂ.2/3 ರ ಜಮೀನು, ಪಶ್ಚಿಮಕ್ಕೆ ಇರುವ ಗಗನ ರವರ ಸರ್ವೆ ನಂಬರ್ ಗೊತ್ತಿಲ್ಲ. ದಾವಾ ಆಸ್ತಿಗಳು ಮೂಲತಃ ಎ.ವಿ.ತಮ್ಮಯ್ಯ ಶೆಟ್ಟಿರವರಿಗೆ ಸೇರಿತ್ತು. ಆ ಬಗ್ಗೆ ರೆವೆನ್ಯೂ ದಾಖಲೆಗಳು ಇರುವುದಿಲ್ಲ. ಎ.ವಿ.ತಮ್ಮಯ್ಯ ಶೆಟ್ಟಿರವರು ಹುಚ್ಚೇಗೌಡರಿಂದ ದಾವಾ ಆಸ್ತಿಗಳನ್ನು ದಿನಾಂಕಃ10-08-1959 ರಲ್ಲಿ ಕ್ರಯಕ್ಕೆ ತೆಗೆದುಕೊಂಡಿದ್ದರು. ಹುಚ್ಚೇಗೌಡರಿಗೆ ಹೇಗೆ ಬಂದಿತ್ತು ಅಂತ ಗೊತ್ತಿಲ್ಲ. ಆ ಸಂದರ್ಭದಲ್ಲಿ ಹುಚ್ಚೇಗೌಡರ ಮಾಲೀಕತ್ವ ಮತ್ತು ಸ್ವಾಧೀನದಲ್ಲಿ ಇದ್ದ ಬಗ್ಗೆ ದಾಖಲೆಗಳನ್ನು ಈಗ ಇರುವುದಿಲ್ಲ. ತಮ್ಮಯ್ಯ ಶೆಟ್ಟಿರವರಿಂದ ದೊಡ್ಡತಮ್ಮೇಗೌಡರ ಮಗ ತಮ್ಮೇಗೌಡ @ ತಮ್ಮಯ್ಯಗೌಡ ದಿನಾಂಕಃ 10-04-1968ರಲ್ಲಿ ಖರೀದಿಗೆ ಮಾಡಿಕೊಂಡಿದ್ದಾರೆ. ಎ.ವಿ.ತಮ್ಮಯ್ಯ ಶೆಟ್ಟರ ಹೆಸರಿನಿಂದ ರೆವೆನ್ಯೂ ದಾಖಲಾತಿಗಳನ್ನು ನೋಡಿಲ್ಲ, ಸಾಕ್ಷಿಯು ಸ್ವತಃ ಹೇಳುವುದೇನೆಂದರೆ ಅವರು ಸ್ವತಃ ನೋಡಿದ್ದರು. ಹುಚ್ಚೇಗೌಡರು ಬರೆದುಕೊಟ್ಟ ಕ್ರಯ ಪತ್ರದಲ್ಲಿ ಯಾವ ಚೆಕ್ಕುಬಂದಿ ನಮೂದಿಸಲಾಗಿತ್ತೋ ಅದನ್ನು ವಾದ ಪತ್ರದಲ್ಲಿ ನಮೂದಿಸಿದ್ದೀರ ಎಂದರೆ ಬದಲಾವಣೆ ಆಗಿದೆ. ತಮ್ಮೇಗೌಡ @ ತಮ್ಮಯ್ಯಗೌಡ ರವರ ಹೆಸರಿನಲ್ಲಿ ಇರುವ ಕ್ರಯ ಪತ್ರದಲ್ಲಿ ಇರುವ ಚೆಕ್ಕುಬಂದಿಯನ್ನೇ ಬರೆಸಿದ್ದೀರ ಎಂದರೆ ಬೇರೆಯವರಿಗೆ ಮಾರಾಟ ಮಾಡಿದ ಕಾರಣ ಚೆಕ್ಕುಬಂದಿಯಲ್ಲಿ ಇರುವ ಹೆಸರು ಬದಲಾವಣೆ ಆಗಿದೆ. ನಿ.ಪಿ.7 ರಲ್ಲಿ ಗುರುತಿಸಿರುವ ಕ್ರಯ ಪತ್ರದ ಒಕ್ಕಣೆಗಳನ್ನು ತಿಳಿದುಕೊಂಡು ಹಾಜರು ಪಡಿಸಿದ್ದೇನೆ. ನಿ.ಪಿ.7 ರಲ್ಲಿ ಇರುವ ಚೆಕ್ಕುಬಂದಿಯನ್ನು ತಿಳಿದುಕೊಂಡಿಲ್ಲ.

ನಿ.ಪಿ.7 ರಲ್ಲಿ ಇರುವ ಚೆಕ್ಕುಬಂದಿ ಗೊತ್ತಿಲ್ಲದ ಕಾರಣ ದಾವಾ ಆಸ್ತಿಯ ಚೆಕ್ಕುಬಂದಿಯಲ್ಲಿ ಬರುವ ಯಾರ ಯಾರ ಹೆಸರು ಬದಲಾವಣೆ ಆಗಿದೆ ಅಂತ ಹೇಳಲು ಗೊತ್ತಿಲ್ಲ ಎಂದರೆ ಸರಿಯಲ್ಲ.

**ಓಎಸ್. ನಂ.*72/2022***

**ಪಿಡಬ್ಲೂ:*02***

ದಾವಾ ಐಟಂ.1 ರ ಪೂರ್ವಕ್ಕೆ ಇರುವ ನಾಗರಾಜು.ಡಿ ರವರು ಜಮೀನು ಮೊದಲು ದೊಡ್ಡತಮ್ಮೇಗೌಡರ ಜಮೀನು, ಪಶ್ಚಿಮಕ್ಕೆ- ಸರ್ವೆ ನಂ.3/3 ಮೊದಲು ಯಾರ ಹೆಸರಿನಲ್ಲಿ ಇತ್ತು ಅಂತ ಗೊತ್ತಿಲ್ಲ, ಉತ್ತರಕ್ಕೆ-ಇರುವ ರಮೇಶ ರವರ ಜಮೀನು ಹಿಂದೆ 1 ನೇ ಪ್ರತಿವಾದಿ ಕೃಷ್ಣೇಗೌಡರ ಹೆಸರಿನಲ್ಲಿ ಇತ್ತು, ಐಟಂ.2 ರ ಪೂರ್ವಕ್ಕೆ ಮೊದಲು ಎ.ವಿ.ತಮ್ಮಯ್ಯ ಶೆಟ್ಟರ ಹೆಸರಿನಲ್ಲಿ ಇತ್ತು, ಪಶ್ಚಿಮಕ್ಕೆ ಇರುವ ಗಗನ ರವರು ಜುಮೀನು ಸ್ವಾಮಿ ರವರ ಹೆಸರಿನಲ್ಲಿ ಇತ್ತು, ಉತ್ತರಕ್ಕೆ ಇರಮ 1 ನೇ ಪ್ರತಿವಾದಿಯ ಜಮೀನು ಮೊದಲು ದೊಡ್ಡತಮ್ಮೇಗೌಡರ ಹೆಸರಿನಲ್ಲಿ ಇತ್ತು. ಈಗ ನಾನು ಹೇಳಿದ ಚೆಕ್ಕುಬಂದಿಯನ್ನು ನಿ.ಪಿ.1 ರಲ್ಲಿ ಗುರುತಿಸಿರುವ ಕ್ರಯ ಪತ್ರದಲ್ಲಿ ಬರೆಯಲಾಗಿದೆ. ದಾವಾ ಆಸ್ತಿಗಳು ಈ ಹಿಂದೆ ಹುಚ್ಚೇಗೌಡರಿಗೆ ಸೇರಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹುಚ್ಚೇಗೌಡರಿಂದ ತಮ್ಮೇಗೌಡರಿಗೆ ಮಾರಾಟವಾಯಿತು ಎಂದು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಮೂಲತಃ ಎಸ್.ಮೈತ್ರೇಯಮ್ಮ ರವರ ಮಾಲೀಕತ್ವ ಮತ್ತು ಸ್ವಾಧೀನದಲ್ಲಿ ಇತ್ತು ಎಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು 1 ನೇ ಪ್ರತಿವಾದಿ ದಿನಾಂಕಃ 31-01-2000 ರಲ್ಲಿ ಮೈತ್ರೇಯಮ್ಮ ಎಂಬುವರಿಂದ ಖರೀದಿಸಿದ್ದಾರೆ ಎಂದರೆ ಸುಳ್ಳು. ದಾವಾ ಆಸ್ತಿಗಳ ರೆವೆನ್ಯೂ ದಾಖಲೆಗಳನ್ನು 2022 ರಲ್ಲಿ ಮಾತ್ರ ನೋಡಿದ್ದೆ. ದಾವಾ ಆಸ್ತಿಗೆ ಕಂದಾಯ ಕಟ್ಟಿದ್ದೇವೆ. ಆ ಬಗ್ಗೆ ದಾಖಲೆ ನಮ್ಮ ಬಳಿ ಇದೆ. ತಮ್ಮೇಗೌಡರ ಹೆಸರಿನಲ್ಲಿ ಯಾವ ವರ್ಷದಿಂದ ಯಾವ ವರ್ಷದವರೆಗೆ ಆರ್.ಟಿ.ಸಿ. ಬಂದಿತು ಅಂತ ನೋಡಿಲ್ಲ.

**ಮರು ವಿಚಾರಣೆ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

**ಓ.ಹೆ.ಕೆ.ಸರಿ ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**

**ಪಿರಿಯಾಪಟ್ಟಣ**